**ಸಾಕ್ಷಿಯನ್ನು ದಿಃ 22.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಸಿ ಆರ್ ವಕೀಲರಿಂದಃ-**

ನಿಪಿ-2 ಆರ್ ಟಿ ಸಿ ಯಂತೆ ಎಂ ಆರ್ ಹೆಚ್ ನಂ. 16/2013-14 ರ ಪ್ರಕಾರ 9 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಅದನ್ನು ನಾನು ಹಾಜರುಪಡಿಸಿಲ್ಲ. ಸರ್ವೆ ನಂ. 180/1 ರಲ್ಲಿ 2 ಎಕರೆ 25 ಗುಂಟೆ ಜಮೀನು ಇರುತ್ತದೆ. 2 ಎಕರೆ 25 ಗುಂಟೆ ಜಮೀನು 9 ನೇ ಪ್ರತಿವಾದಿಯ ಹೆಸರಿನಲ್ಲಿ ಇಲ್ಲ. 2 ಎಕರೆ 25 ಗುಂಟೆ ಜಮೀನು 9 ನೇ ಪ್ರತಿವಾದಿಯ ತಂದೆ ಕುಮಾರ್ ರವರ ಹೆಸರಿನಲ್ಲಿ ನೋಂದಾಯಿತ ವಿಭಾಗ ಪತ್ರದ ಪ್ರಕಾರ ಎಂ ಆರ್ ನಂ. 1/2005-06 ರಂತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರು ವಿಭಾಗ ಮಾಡಿಕೊಂಡ ವಿಚಾರ ನನಗೆ ಗೊತ್ತಿಲ್ಲ. ತಕರಾರು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ.

ಎಂ ಆರ್ ಹೆಚ್-49/2018-19 ರಂತೆ 9 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಮರೆತು ಹೋಗಿದೆ. ಅಣ್ಣ ವಿಜಯಕಮಾರ್ ತೀರಿಕೊಂಡ ನಂತರ 2 ಮತ್ತು 3 ನೇ ಪ್ರತಿವಾದಿ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಣ್ಣ ವಿಜಯಕಮಾರ್ ತೀರಿಕೊಂಡಿದ್ದನ್ನು ನನಗೆ ಗೊತ್ತು. ಅವರು ತೀರಿಕೊಂಡು ಈಗ 7 ವರ್ಷ ಆಗಿರುತ್ತದೆ. ಅವರ ಅಂತ್ಯ ಸಂಸ್ಕಾರಕ್ಕೆ ಬೇರೆಯವರು ಹೇಗೆ ಬರುತ್ತಾರೋ ಹಾಗೇ ಬಂದು ಹೋಗಿದ್ದೆ. ತವರು ಮನೆಗೆ ನಾನು ಬಂದಿರುವುದಿಲ್ಲ. ತಂದೆ-ತಾಯಿ ಇದ್ದ ಕಾಲದಲ್ಲೂ ನಾನು ತವರು ಮನೆಗೆ ಬಂದಿಲ್ಲ.

ನಿಪಿ-3 ಆರ್ ಟಿ ಸಿ ಪ್ರಕಾರ ಸರ್ವೆ ನಂ. 170/2 ರಲ್ಲಿ 9 ನೇ ಪ್ರತಿವಾದಿ ಹೆಸರಿಗೆ ಎಂ ಆರ್ ಹೆಚ್ 15/2013-2014 ರಂತೆ 1 ಎಕರೆ 10 ವರೆ ಗುಂಟೆ ಖಾತೆ ಆಗಿರುತ್ತದೆ ಎಂದರೆ ನನಗೆ ವಿಷಯ ಗೊತ್ತಿರುವುದಿಲ್ಲ ಎನ್ನುತ್ತಾರೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಪಿ-4 ಸರ್ವೆ ನಂ 170/9 ಕ್ಕೆ ಸಂಬಂಧಿಸಿದಂತೆ 2 ಮತ್ತು 3 ನೇ ಪತಿವಾದಿ ಹೆಸರಿಗೆ ಎಂ ಆರ್ ಹೆಚ್ 49/2018-19 ರಂತೆ ಖಾತೆ ಆಗಿರುತ್ತದೆ ಎಂದರೆ ನಾನು ಮರೆತಿರುತ್ತೇನೆ. ಮೂಲತಃ ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣ ವಿಜಯ ಕುಮಾರ್ ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಅವರೂ ಓದಿಲ್ಲ ನಾನು ಓದಿಲ್ಲ ಎನ್ನುತ್ತಾರೆ. ತಂದೆ ಕರೀಗೌಡ ನನ್ನ ಅಣ್ಣ ವಿಜಯ ಕುಮಾರ್ ಮತ್ತು ತಮ್ಮ ಕುಮಾರ್ ಇವರ ನಡುವೆ ನೋಂದಾಯಿತ ವಿಭಾಗ ಪತ್ರ ಆಗಿ ಇಲ್ಲಿಗೆ 20 ವರ್ಷಗಳಾಗಿದೆ ಎಂದರೆ ನನಗೆ ವಿಷಯ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಭಾಗ ಪತ್ರವನ್ನು ಮಾಡುವಾಗ ನನ್ನ ಅಕ್ಕ ಮಿನಾಕ್ಷಿ ಅಂದರೆ 4 ರಿಂದ 8 ನೇ ಪ್ರತಿವಾದಿಯರ ತಾಯಿ, ನನ್ನ ತಾಯಿ ಸೀತಮ್ಮ ಮತ್ತು ನನ್ನ ಸಮ್ಮುಖದಲ್ಲಿ ಚರ್ಚಿಸಿದ್ದರು ಎಂದರೆ ಸರಿಯಲ್ಲ.

ಹಣಗೋಡು ಹೋಬಳಿ ವಾರಂಚಿ ಗ್ರಾಮದಲ್ಲಿ 4 ಎಕರೆ 38 ಗುಂಟೆ ಜಮೀನು ತಂದೆ ಕರೀಗೌಡರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸೀತಾ ಕೊಂ ಕರೀಗೌಡ ಎಂದರೆ ನನ್ನ ತಾಯಿ.ಹೆಚ್ ಕೆ ವಿಜಯ ಎಂಬುವವರು ನನ್ನ ಅಣ್ಣ ಎಂದರೆ ಸರಿ. ಹೆಚ್ ಕೆ ಚೇತನ್ ಕುಮಾರ್ ರವರು ನನ್ನ ತಮ್ಮ ಕುಮಾರ್ ರವರ ಮಗ. ನನ್ನ ಹೆಸರು ಸುಜಾತಾ ಬಿನ್ ಲೇಟ್ ಕರೀಗೌಡ ಎಂದರೆ ನಾನೇ ಇರುತ್ತೇನೆ. ಸೀತಮ್ಮ ಕೊಂ ಲೇಟ್ ಕರೀಗೌಡ ಎಂದರೆ ನನ್ನ ತಾಯಿ, ಅವರು ಈ ಪ್ರಕರಣದ 1 ನೇ ಪ್ರತಿವಾದಿ. 1 ನೇ ಪ್ರತಿವಾದಿ-ಸೀತಮ್ಮ, ಹೆಚ್ ಕೆ ವಿಜಯ, 9 ನೇ ಪ್ರತಿವಾದಿ -ಹೆಚ್ ಕೆ ಚೇತನ್ ಕುಮಾರ್ ಮತ್ತು ನಾನು ವಾದಿ ಎನ್ನುವವರ ವಿರುದ್ಧ ಓಎಸ್ ನಂ. 37/2018 ರಂತೆ ಡೊನಾಲ್ಡ್ ಫೀಟರ್ ವಾಲ್ಸ್ ಎಂಬುವವರು ದಾವೆ ಹಾಕಿದ್ದರು ಎಂದರೆ ಸರಿಯಲ್ಲ. ನಾವುಗಳು ಎಸ್ ನವೀನ್ ಕುಮಾರ್ ಎಂಬ ವಕೀರಲನ್ನು ನೇಮಕ ಮಾಡಿಕೊಂಡಿದ್ದೇವು ಎಂದು ವಕಾಲತ್ತು ತೋರಿಸಲಾಗಿ ಅದರಲ್ಲಿ ನನ್ನ ಹೆಸರು ಇರುತ್ತದೆ ಆದರೆ ನಾನು ವಕೀಲರನ್ನು ನೇಮಕ ಮಾಡಿಕೊಂಡಿರುವುದಿಲ್ಲ ಎನ್ನುತ್ತಾರೆ. ನಾನು ಸದರಿ ವಕಾಲತ್ತಿಗಾಗಲಿ ತಕರಾರಿಗಾಗಲಿ ಸಹಿ ಮಾಡಿಲ್ಲ. ಸದರಿ ದಾವೆಯಲ್ಲಿ ರಾಜಿ ಅರ್ಜಿ ಸಲ್ಲಿಸಿ ರಾಜಿ ಮಾಡಿಕೊಂಡಿದ್ದೇವು, ಡೋನಾಲ್ಡ್ ಪೀಟರ್ ವಾಲ್ಸ್ ಜೊತೆಗೆ ರಾಜಿ ಮಾಡಿಕೊಂಡಿದ್ದೇವು ಎಂದರೆ ನಾನು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ರಾಜಿ ಅರ್ಜಿಯಲ್ಲಿ ಇರುವ ಸಹಿ ನನ್ನದೇ ಇರುತ್ತದೆ ಎಂದರೆ ನಾನು ಮಾಡಿಲ್ಲ.

ಓಎಸ್ ನಂ. 37/2018 ಪ್ರಕರಣ ದಾಖಲು ಮಾಡುವಾಗ ನನ್ನ ಅಣ್ಣ ಜೀವಂತ ಇದ್ದರೋ ಇಲ್ಲವೋ ಎಂದು ನನಗೆ ಮರೆತು ಹೋಗಿದೆ. ಪ್ರಕರಣ ದಾಖಲು ಮಾಡುವ ಸಂದರ್ಭದಲ್ಲಿ ನನ್ನ ತಂದೆ ಇದ್ದರೋ ಇಲ್ಲವೋ ಎಂದು ಮರೆತಿರುತ್ತೇನೆ. ಸದರಿ ದಾವೆಯಲ್ಲಿ ಅಕ್ಕ ಮೀನಾಕ್ಷಿ ಆಗಲಿ ಅವರ ಮಕ್ಕಳುಗಳಾಗಲಿ ಪಕ್ಷಗಾರರು ಆಗಿರಲಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ನನ್ನ ಅಣ್ಣನ ಶಾಲಾ ದಾಖಲಾತಿಗಳಲ್ಲಿ ವಿಜಯಕುಮಾರ್ ಎಂದು ಇರುತ್ತದೆ ಎಂದರೆ ಸರಿ. ನನ್ನ ಅಣ್ಣ ಹೆಸರು ವಿಜಯಕುಮಾರ್ ಎಂದು ಇದ್ದರೂ ಹೆಚ್ ಕೆ ವಿಜಯ ಎಂದು ಸುಳ್ಳು ಹೆಸರು ಕೊಟ್ಟು ಡೋನಾಲ್ಡ್ ಪೀಟರ್ ವಾಲ್ಸ್ ಕಡೆಯಿಂದ ಕೇಸು ಹಾಕಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ದಾವೆ ಹಾಕಿದ ಸಂದರ್ಭದಲ್ಲಿ 3 ನೇ ಪ್ರತಿವಾದಿ ಪೂಜಾ ವಯಸ್ಕಳಿದ್ದಳು ಎಂದರೆ ಅವಳ ವಯಸ್ಸು ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕುವ ಸಂದರ್ಭದಲ್ಲಿ ಆಕೆಯ ಹೆಸರು ಎಷ್ಟು ಎಂದು ಬರೆಸಿದ್ದಿರಾ ಎಂದರೆ ಈಗ ಮರೆತು ಹೋಗಿದೆ. 2022 ರಲ್ಲಿ ಈ ದಾವೆ ಹಾಕಿದ್ದು ಸದರಿ ದಾವೆಯ ಯಾವುದೇ ವಿಚಾರಗಳು ನನಗೆ ಗೊತ್ತಿಲ್ಲ ಮರೆತು ಹೋಗಿದೆ ಎಂದರೆ ಸರಿಯಲ್ಲ.

ವಾರೆಂಚಿ ಗ್ರಾಮದ ಸರ್ವೆ ನಂ. 25/39, 40, 41/ಬಿ, ಒಟ್ಟು 4 ಎಕರೆ 38 ಗುಂಟೆ ಯನ್ನು ಡೋನಾಲ್ಡ್ ಪೀಟರ್ ವಾಲ್ಸ್ ರವರಿಗೆ ತಂದೆ ಕರೀಗೌಡರು ಅಗ್ರಿಮೆಂಟ್ ಬರೆದುಕೊಟ್ಟಿದ್ದರು ಎಂದರೆ ನನಗೆ ವಿಷಯ ಗೊತ್ತಿಲ್ಲ. ವಾರೆಂಚಿ ಗ್ರಾಮದ ಸರ್ವೆ ನಂ. 25/39, 40, 41/ಬಿ, ಒಟ್ಟು 4 ಎಕರೆ 38 ಗುಂಟೆ

ಜಮೀನನ್ನು ನನಗೆ ಮತ್ತು ನನ್ನ ಅಕ್ಕನಿಗೆ ತಂದೆ ಮತ್ತು ಅಣ್ಣ ತಮ್ಮಂದಿರು 2005 ರಲ್ಲಿ ವಿಭಾಗ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ಅದರಂತೆ ನಾನು ನನ್ನ ಅಕ್ಕ ಸದರಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಕ್ಕನನ್ನು ವಾರೆಂಚಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ.

ಮಕ್ಕಳ ಮದುವೆಗಾಗಿ 4 ಎಕರೆ 38 ಗುಂಟೆ ಜಮೀನನ್ನು ಮಾರಾಟ ಮಾಡುತ್ತೇವೆ ಎಂದು ತಂದೆ ಮೂಲಕ ರೂ.21.00 ಲಕ್ಷಕ್ಕೆ ಅಗ್ರಿಮೆಂಟ್ ಮಾಡಿಸಿದ್ದೇವು ಎಂದರೆ ಸರಿಯಲ್ಲ.ನನ್ನ ಅಣ್ಣ ವಿಜಯಕುಮಾರಿ ಪಾನಮತ್ತನಾಗಿ ಯಾವುದೇ ಜ್ಞಾನ ಇಲ್ಲದಿದ್ದಾಗ ಅಸಲು ದಾವೆ 37/2018 ದಾವೆಯಲ್ಲಿ ಸಲ್ಲಿಸಿದ ರಾಜಿ ಅರ್ಜಿಗೆ ಕರೆದುಕೊಂಡು ಬಂದು ಸಹಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ರೂ.21.00 ಲಕ್ಷ ಹಣವನ್ನು ನಾನು ಯಾರಿಗೂ ಕೊಡದೇ ನಾನು ಒಬ್ಬಳೇ ಅನುಭವಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಡೋನಾಲ್ಡ್ ಫೀಟರ್ ವಾಲ್ಸ್ , ನನ್ನ ತಾಯಿ, 9 ನೇ ಪ್ರತಿವಾದಿ ಎಲ್ಲರೂ ಸೇರಿಕೊಂಡು 2 ಮತ್ತು 3 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ವಾರೆಂಚಿ ಗ್ರಾಮದ ಸರ್ವೆ ನಂ. 25/39, 40, 41/ಬಿ, ಒಟ್ಟು 4 ಎಕರೆ 38 ಗುಂಟೆ ಜಮೀನನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಕರೀಗೌಡ ಬಿನ್ ಮೂಗೇಗೌಡ ಎಂದು ಇದ್ದರೂ ವಾರೆಂಚಿ ಗ್ರಾಮದ ಸರ್ವೆ ನಂಬರನ ಖಾತೆಯಲ್ಲಿ ಕರೀಗೌಡ ಬಿನ್ ಕರೀಗೌಡ ಎಂದು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಜಮೀನು ತಂದೆಯ ಹೆಸರಿಗೆ ದರಖಾಸ್ತು ಮೂಲಕ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಮ್ಮ ತಂದೆ ಮಾಡಿಸಿಕೊಂಡಿದ್ದರು ಎಂದು ನನಗೆ ವಿಷಯ ಗೊತ್ತಿಲ್ಲ ಎನ್ನುತ್ತಾರೆ. ನನನ ಅಣ್ಣ ಮತ್ತು ತಂದೆ ವ್ಯವಸಾಯಯೋಗ್ಯ ಭೂಮಿಯನ್ನಾಗಿ ಮಾಡಿದ ನಂತರ ಸದರಿ ಜಮೀನು ಅವರಿಗೆ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.